**ಮಧ್ಯಂತರ ಅರ್ಜಿ ನಂ.9 ಮತ್ತು 10 ರ ಆದೇಶದನ್ವಯ ಸಾಕ್ಷಿಯನ್ನು ದಿಃ *21/07/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀ ಪಿಪಿಜೆ ಪ್ರತಿವಾದಿ ನಂ.3 ಪರ ವಕೀಲರಿಂದ.***

ನಾನು ಹತ್ತನೇ ತರಗತಿಯವರೆಗೆ ಓದಿರುತ್ತೇನೆ. ಪ್ರತಿವಾದಿ ನಂ.1 ಮತ್ತು 2 ನನ್ನ ತಂದೆ-ತಾಯಿಯರು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಸಹೋದರರ ನಡುವೆ ಎರಡು ಬಾರಿ ವಾಟ್ನಿಯಾಗಿದೆ ಎಂದರೆ ಸರಿ. ದಿಃ27-12-2013 ರ ವಾಟ್ನಿ ಜಮೀನುಗಳ ಕುರಿತು ಎಂದರೆ ಸರಿ. ದಿಃ11-02-2019 ರ ವಾಟ್ನಿ ಮನೆ ವ ಖುಲ್ಲಾ ಜಾಗೆ ಕುರಿತು ಆಯಿತು ಎಂದರೆ ಸರಿ. ಸದರಿ ವಾಟ್ನಿಯ ಪ್ರಕಾರ ಸಿಟಿಸಿ ನಂ.645/ಸಿ/1/ಎಲಬಿ ನನ್ನ ತಂದೆಯ ಹಿಸ್ಸೆಗೆ ಬಂತು ಎಂದರೆ ಸರಿ. ಸದರಿ ಸ್ವತ್ತು 2023 ರ ಆಕ್ಟೊಬರವರೆಗೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ 2023 ಅಥವಾ ಅದರ ಹಿಂದಿನ ದಾಖಲೆಗಳನ್ನು ನೋಡಿದಾಗ ಸಂಬಂಧಿಸಿದ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ನಮೂದು ಆಗಿರುವುದು ಮಾತ್ರ ಕಂಡು ಬರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ದಾಖಲೆಗಳಲ್ಲಿ ನನ್ನ, 2 ನೇ ವಾದಿ ಹಾಗೂ 2 ನೇ ಪ್ರತಿವಾದಿಯ ಹೆಸರು

ನಮೂದು ಆಗಿರುವುದು ಕಂಡು ಬರುವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಎಲ್ಲ ದಾಖಲೆಗಳನ್ನು ತೆಗೆಯಿಸಿ ನೋಡಿ 1 ನೇ ಪ್ರತಿವಾದಿ ಸದರಿ ಸ್ವತ್ತಿನ ಮಾಲೀಕರು ಎಂದು ಖಚಿತಪಡಿಸಿಕೊಂಡು ಖರೀದಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಖರೀದಿ ಮಾಡಿದ್ದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸದರಿ ಆಸ್ತಿ ಖರೀದಿ ಮಾಡಿರುವ ಬಗ್ಗೆ ನಿಮಗೆ ಯಾವಾಗ ತಿಳಿಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ತನ್ನ ದುಶ್ಚಟಕ್ಕಾಗಿ ದಾವಾ ಸ್ವತ್ತನ್ನು ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿದು ಈ ದಾವೆ ಹೂಡಿದ್ದೇವೆ. ಪ್ರಸ್ತುತ ದಾವೆಯನ್ನು ಮೂರು ಆಸ್ತಿಗಳ ಕುರಿತು ದಾಖಲು ಮಾಡಿದ್ದೇನೆ. ಕೆಲವೊಂದು ಸ್ವತ್ತುಗಳನ್ನು ಅಕ್ರಮ ಸಕ್ರಮ ಪ್ಲಾಟುಗಳನ್ನಾಗಿ ಮಾಡಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಕೆಲವು ದಾಖಲೆಗಳನ್ನು ತೋರಿಸಿ ಅವುಗಳಲ್ಲಿ ನಿಮ್ಮ ಸಹಿ ಕಂಡು ಬರುತ್ತದೆಯೇ ಎಂದು ಕೇಳಿದಾಗ ಸಾಕ್ಷಿಯು ದಾಖಲೆ ಮತ್ತು ದಾಖಲೆಗಳಲ್ಲಿನ ಸಹಿಗಳನ್ನು ನೋಡಿ ಅವುಗಳನ್ನು ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ದಾಖಲೆಗಳನ್ನು ***ನಿ.ಡಿ.1 ರಿಂದ 3*** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಗಳನ್ನು ***ನಿ.ಡಿ.1 ಎ ರಿಂದ 3 ಎ*** ಎಂದು ಗುರುತಿಸಲಾಯಿತು. ನಿ.ಡಿ.1 ರಿಂದ 3 ನಾವು ಅಕ್ರಮ ಸಕ್ರಮದಲ್ಲಿ ಪ್ಲಾಟು ಮಾರಾಟ ಮಾಡಿದ ದಾಖಲೆಗಳು ಎಂದರೆ ಸರಿ. ನಿ.ಡಿ.1 ರಿಂದ 3 ರಂತೆ ದಾಖಲೆಗಳನ್ನು ಬರೆದುಕೊಡುವಾಗ ನಮ್ಮ ಹಿಸ್ಸೆದ ಹಣವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ.1 ರಿಂದ 3 ರದತ ದಾಖಲೆಗಳಲ್ಲಿ ಬಂದ ನಮ್ಮ ಬಾಬತ್ತು ಹಣವನ್ನು ಪಡೆದುಕೊಂಡಿರುವ ಕಾರಣ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಾವಾ ಆಸ್ತಿಯಲ್ಲಿ ನಾವು ನಮ್ಮ ಹಕ್ಕನು ಹೊಂದಲು ಅರ್ಹರಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸರಿಯಾದ ಮತ್ತು ಸೂಕ್ತವಾದ ಹಣವನ್ನು ಪಾವತಿಸಿ 1 ನೇ ಪ್ರತಿವಾದಿಯಿಂದ ದಾವಾ ಅನುಸೂಚಿ ಡ ಆಸ್ತಿ

ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಡ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ದಿ:09-10-2023 ರಿಂದ ನನ್ನ ತಂದೆ 1 ನೇ ಪ್ರತಿವಾದಿ ಬರೆದುಕೊಟ್ಟ ಪತ್ರದನ್ವಯ ದಾವಾ ಅನುಸೂಚಿ ಡ ಸ್ವತ್ತಿನ ಕಬ್ಜೆ ಹೊಂದಿದ್ದಾರೆ ಎಂದರೆ ಸರಿ. ಸದರಿ ಸ್ವತ್ತನ್ನು ಮಾರಾಟ ಮಾಡಲು 1 ನೇ ಪ್ರತಿವಾದಿಗೆ ಸ್ವತಂತ್ರವಾದ ಅಧಿಕಾರವಿತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಕಾನೂನುಬದ್ದವಾದ ರಕಂ ಪಾವತಿಸಿರುವ ಕಾರಣ ಅವರು ಕಾನೂನುಬದ್ದ ಖರೀದಿದಾರರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಅನುಸೂಚಿ ಡ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೇಯಿದ್ದರೂ 3 ನೇ ಪ್ರತಿವಾದಿಗೆ ತೊಂದರೆ ನೀಡಲು ಸದರಿ ಸ್ವತ್ತನ್ನು ಸೇರಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.